## ಭಾಸ್ಕರ ಕ್ಷೇತ್ರದ ಮಹಿಮೆ

ಈ ಭಾಸ್ಕರ ಮಹಾಕ್ಷೇತ್ರದಲ್ಲಿ ಶ್ರೀ ವಿಠಲೇಶ್ವರ ಸ್ವಾಮಿ ದೇವಾಲಯ, ಅಗಸ್ತ್ಯೇಶ್ವರಸ್ವಾಮಿ ಸನ್ನಿಧಿ, ರಣಭೇರಮ್ಮನ ದೇವಾಲಯ ಇವುಗಳೂ ಪ್ರೇಕ್ಷಣೀಯವಾಗಿದೆ. ಈ ಕ್ಷೇತ್ರದಲ್ಲಿ ಶ್ರೀಯಾಜ್ಞವಲ್ಕ್ಯ ಮಹರ್ಷಿಗಳ ಆಶ್ರಮವಿರುತ್ತೆ. ಶ್ರೀ ಶ್ರೀ ಶ್ರೀಪಾದರಾಯರ ಮಠದ ಶ್ರೀಗಳಿಂದ ಇತ್ತೀಚೆಗೆ (ಕ್ರಿ.ಶ.೧೯೬೩) ಶ್ರೀ ಸೂರ್ಯಭಗವಾನರ ಮತ್ತು ಶ್ರೀ ಯಾಜ್ಞವಲ್ಕ್ಯ ಮಹರ್ಷಿಗಳ ಪ್ರತಿಷ್ಠಾಪಿತವಾಗಿವೆ. ಭಾರತದಲ್ಲೇ ಅತಿ ವಿರಳವಾದ ಶ್ರಿ ಸೂರ್ಯನಾರಾಯಣ ದೇವರ ದರ್ಶನವು ಮಹಾಪುಣ್ಯಪ್ರದವಾಗಿದೆ.

ಭಾಸ್ಕರಕ್ಷೇತ್ರದ ಬಳಿ ಅಗಸ್ತ್ಯ ಮತ್ತು ಕೌಶಿಕ ಮಹರ್ಷಿಗಳು ತಪಸ್ಸು ಮಾಡಿ ಪ್ರಸಿದ್ಧರಾದ ನೃಸಿಂಹತೀರ್ಥವು ಬಹಳ ಪವಿತ್ರವಾದ ಸ್ಥಳ. ಈ ತೀರ್ಥದ ಬಳಿ ನೃಸಿಂಹಸ್ವಾಮಿ ದೇವಸ್ಥಾನವಿದೆ. ಈ ನೃಸಿಂಹ ತೀರ್ಥದ ಬಳಿ ಶ್ರಿ ಶ್ರೀ ಶ್ರೀಪಾದರಾಜ ಸ್ವಾಮಿಗಳ ಬೃಂದಾವನವೂ, ಮಠವೂ ಪ್ರಸಿದ್ಧಿಯಾಗಿದೆ. ಶ್ರೀಪಾದರಾಜರ ಅತ್ಯುತ್ಕೃಷ್ಟ ಕೊಡುಗೆಯೆಂದರೆ, ಜನರ ಆಡುಭಾಷೆ ಕನ್ನಡದಲ್ಲೇ ಕಾವ್ಯರಚಿಸಲು ಆ ಮೂಲಕ ಸುಸಂಸ್ಕೃತ ಜನಾಂಗವೊಂದನ್ನು ನಿರ್ಮಿಸಿ, ಶ್ರೀರಂಗದಿಂದ ಮುಳಬಾಗಿಲನವರೆಗೆ ಭಕ್ತಿರಸದ ಪ್ರವಾಹವನ್ನೇ ಹರಿಸಿ ಭಕ್ತಿಯುಗದ ಪ್ರವರ್ತಕರೆನಿಸಿದರು. ಶ್ರೀಪಾದರಾಜರ ಬೃಂದಾವನದ ದರ್ಶನವು ಬಹಳ ಪುಣ್ಯಪ್ರದವಾದದು. ಪ್ರಸಿದ್ಧವಾದ ಶ್ರೀಪಾದರಾಯರ ಮಠ ಸಂಸ್ಥಾನದಿಂದ ಪ್ರತಿ ವರ್ಷದ ಜೇಷ್ಠ ಮಾಸದಲ್ಲಿ ದೇವ, ಗುರು ಆರಾಧನೆಗಳು ವೈಭವಯುತವಾಗಿ ನಡೆಯುವ ಅಂಶ, ಪ್ರಸಿದ್ಧಿಯೂ ಆಕರ್ಷಣೀಯವೂ ಆಗಿದೆ.

ಈ ಮುಳಬಾಗಿಲ ಕ್ಷೇತ್ರದ ಇನ್ನೊಂದು ವಿಶೇಷವೆಂದರೆ, ವರ್ಷಕ್ಕೊಮ್ಮೆ ಇಲ್ಲಿ ಹಿಂದು ಮುಸ್ಲಿಮರ ಐಕ್ಯಮತದ ಕುರುಹಾಗಿ 'ಉರುಸ್' ಜಾತ್ರೆಯು ನಡೆಯುತ್ತದೆ. ಇದಕ್ಕೆ ಅನೇಕ ಕಡೆಗಳಿಂದ ಸಾವಿರಾರು ಜನ ಹಿಂದು ಮುಸ್ಲಿಮರು ಭಾಗವಹಿಸುತ್ತಾರೆ.

ಈ ರೀತಿ ಭಕ್ತರಿಗೆ ಅಭಯಪ್ರದವಾಗಿರುವ ಭಾಸ್ಕರಕ್ಷೇತ್ರವು ಪುರಾಣಕಾಲದಿಂದಲೂ ಸಹ ಯಾತ್ರಿಕರ ಸೋಪಾನವಾಗಿದೆ. ತಿರುಪತಿ ಕ್ಷೇತ್ರವನ್ನು ಸಂದರ್ಶಿಸಲು ಹೋಗುವ ಸಹಸ್ರಾರು ಯಾತ್ರಿಕರು ಮುಳಬಾಗಿಲಿನ ಶ್ರೀ ಮಾರುತಿಯದರ್ಶನ ಪಡೆದು, ಆತನ ಅನುಗ್ರಹದಿಂದ ಮುಂದೆ ತಿರುಪತಿ ತಿಮ್ಮಪ್ಪ ದರ್ಶನವನ್ನು ಹೊಂದಲು ಪ್ರಯಾಣವನ್ನು ಮುಂದುವರೆಸುತ್ತಾರೆ.

ಆಂಜನೇಯೋ ಮಹಾವೀರೋ<br>
ಹನುಮಾನ್ ಮಾರುತಾತ್ಮಜ<br>
ತತ್ವ ಜ್ಞಾನ ಪ್ರದಾ ಸೀತಾದೇವೀ<br>
ಮುದ್ರಾ ಪ್ರದಾಯಕ: ।

ಪ್ರವಾಸಿಗರ ಸ್ವರ್ಗದಂತಿರುವ ಕರ್ನಾಟಕ ರಾಜ್ಯವು ಪವಿತ್ರ ಪುಣ್ಯ ಕ್ಷೇತ್ರಗಳ ನೆಲೆಯೂ ಆಗಿರುತ್ತದೆ. ಕೋಲಾರ ಜಿಲ್ಲೆಯ ಭಾಸ್ಕರಕ್ಷೇತ್ರವು ಇಂತಹ ಪವಿತ್ರ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿದೆ.

ಬೆಂಗಳೂರು ಮದರಾಸು ಹೆದ್ದಾರಿಯ ೬೧ನೆಯ ಮೈಲಿ (ಸುಮಾರು ೧೦೦ ಕಿ.ಮೀ.ದೂರ)ಯಲ್ಲಿ ಪ್ರಸಿದ್ಧವಾದ ಈ ಭಾಸ್ಕರಕ್ಷೇತ್ರವು (ಈಗಿನ ಮುಳಬಾಗಿಲು) ಇದೆ. ಮುಳಬಾಗಿಲು ಅಥವಾ ಭಾಸ್ಕರ ಕ್ಷೇತ್ರವು ವಿಜಯನಗರ ಅರಸರ ರಾಜ್ಯಕೆ ಮೂಡಲ ಬಾಗಿಲಾಗಿತ್ತೆಂದು ಇಲ್ಲಿನ ಸ್ಥಳ ಪುರಾಣಗಳು ಹೇಳುತ್ತವೆ. ಭೂವೈಕುಂಠವೆಂದು ಖ್ಯಾತವಾದ ತಿರುಪತಿಯಂತಹ ಪವಿತ್ರಕ್ಷೇತ್ರಕ್ಕೂ ಮೂಡಲ ಬಾಗಿಲಾದ ಇದು ಮುಳವಾಯಿ,

ಮುಳುಬಾಗಿಲೆಂದೇ ಖ್ಯಾತವಾಗಿದೆ. ಮಹಾಭಾರತದ ಯುದ್ಧವಾದ ಮೇಲೆ ತನ್ನ ಧ್ವಜದ ಮೇಲಿದ್ದ ಆಂಜನೇಯನನ್ನು ಶ್ರೀ ಕೃಷ್ಣನ ಹಿರಿತನದಲ್ಲಿ ಅರ್ಜುನನು ಇಲ್ಲಿಯೇ ಪ್ರತಿಷ್ಠಾಪಿಸಿದನೆಂದು ಐತಿಹ್ಯವಿದೆ. ದ್ವೈತ ಸಿದ್ಧಾಂತ ದ ಹಿನ್ನೆಲೆಯಲ್ಲಿ ಅತ್ಯಂತ ಮಹತ್ವಪೂರ್ಣವಾಗಿರುವ ಮುಳ ಬಾಗಿಲು ಅಕ್ಷೋಭ್ಯತೀರ್ಥರ ವಿದ್ಯುತ್ ಸ್ಪರ್ಶದಿಂದ ಪುನೀತವಾಯಿತು. ಅದ್ವೈತ ಪ್ರತಿಪಾದಕರಾದ ಶ್ರೀ ವಿದ್ಯಾರಣ್ಯರು, ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಅಕ್ಷೋಭ್ಯತೀರ್ಥರು ಮುಳಬಾಗಿಲನ್ನೇ ತಮ್ಮ ವಾದ್ಯಗೋಷ್ಠಿಯ ವೇದಿಕೆಯನ್ನಾಗಿ ಮಾಡಿಕೊಂಡರು. ಇಂತಹ ಪವಿತ್ರವಾದ ದಿವ್ಯಕ್ಷೇತ್ರಕ್ಕೆ ಬಂದು ನೆಲೆಸಿದ ಶ್ರೀ ಪಾದರಾಜರು, ಈ ಸ್ಥಳವನ್ನೆ ದ್ವೈತದರ್ಶನವನ್ನು ಕಲಿಸುವ ಪ್ರಮುಖ ಕೇಂದ್ರವನ್ನಾಗಿ ಮಾಡಿದರು. ಅಂದಿನ ದ್ವೈತ ವಿಶ್ವವಿದ್ಯಾಲಯವೆಂದೇ ಮುಳಬಾಗಿಲು ಖ್ಯಾತವಾಗಿತ್ತು. ಇಂದಿಗೂ ಮುಳಬಾಗಿಲಿನಲ್ಲಿರುವ ಶ್ರೀ ಪಾದರಾಜರ ಮಠವು ದ್ವೈತಾನುಯಾಯಿಗಳಿಗೆ ತೀರ್ಥಕ್ಷೇತ್ರವಾಗಿದೆ.

ಮುಳಬಾಗಿಲಿನ ಬಸ್ ನಿಲ್ದಾಣವನ್ನು ತಲುಪುತ್ತಲೇ ಆಕರ್ಷಣೀಯವಾದ ಶ್ರೀ ರಾಮಮಂದಿರ, ಶ್ರೀ ರಾಮಚಂದ್ರ ಮತ್ತು ಸೀತಾಮಾತೆಯ ಭವ್ಯ ಮೂರ್ತಿಗಳು ಸಮೀಪದಲ್ಲೇ ಶ್ರೀ ಮದಾಂಜನೇಯ ಸ್ವಾಮಿಯ ದೇವಾಲಯದ ಬೃಹದಾಕಾರದ ಗೋಪುರ, ಪ್ರಾಕಾರ ಕಾಣುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಉಕ್ತವಾದ ಭಾಸ್ಕರ ಕ್ಷೇತ್ರಮಹಾತ್ಮೆಯಂತೆ ಆಂಜನೇಯ ದೇವಸ್ಥಾನದ ಎದುರಿಗೆ ಕಾಣುವ ಬೆಟ್ಟವು ಅಂಜನಾದ್ರಿಯೆಂದೂ, ಈ ಬೆಟ್ಟದಲ್ಲಿ ಅಂಜನಾದೇವಿ ವಿಹಾರ ಮಾಡುತ್ತಿದ್ದಳೆಂದೂ, ಇಲ್ಲಿಯೇ ಆಂಜನೇಯನಿಗೆ ಶ್ರೀ ಸೂರ್ಯಭಗವಾನರಿಂದ ಜ್ಞಾನೋಪದೇಶವಾಯಿತೆಂದೂ, ಆದ್ದರಿಂದಲೇ ಇದಕ್ಕೆ ಭಾಸ್ಕರಕ್ಷೇತ್ರವೆಂಬ ಹೆಸರು ಬಂದಿತೆಂದೂ ತಿಳಿದು ಬರುತ್ತದೆ.

ವಿಶಾಲ ಪುಷ್ಪೋದ್ಯಾನದ ಮಧ್ಯೆ ಶ್ರೀ ರಾಮಭಕ್ತ ಆಂಜನೇಯ ಡೇವಸ್ಥಾನವು ದಶಾವತಾರ ಚಿತ್ರಗಳಿಂದ ಅಲಂಕರಿಸಲ್ಪಟ್ಟು ನಿರ್ಮಿತವಾಗಿದೆ. ಶ್ರೀ ಆಂಜನೇಯ ದೇವಸ್ಥಾನದ ಪಶ್ಚಿಮಕ್ಕೆ ಕಾಣುವ ಬೆಟ್ಟವು ಆದಿಶೇಷನು ಅದ್ಭುತಾಕಾರವಾದ ತನ್ನ ಹೆಡೆಯನ್ನು ಎತ್ತಿಕೊಂಡಿರುವಂತೆ ಗೋಚರಿಸುವುದು. ಮುಂದೆ ಏಳು ಅಂತಸ್ತಿನಿಂದ ಕೂಡಿದ ಬೃಹದಾಕಾರಗೋಪುರ, ಪಂಚತತ್ವಗಳಂತೆ ಐದು ಕಲಶಗಳಿಂದ ಕಂಗೊಳಿಸುತ್ತಿದೆ. ಒಳಗಡೆ ಎಡಭಾಗಕ್ಕೆ ಅಲಂಕಾರ ಮಂಟಪ ಇದೆ. ಇಲ್ಲಿ ಪೌರಾಣಿಕ ಸಂಗತಿಗಳನ್ನು ಎತ್ತಿತೋರಿಸುವ ಅನೇಕ ಸುಂದರವಾದ ಕಲಾಚಿತ್ರಗಳು ಕಂಗೊಳಿಸುತ್ತಿವೆ. ಮತ್ತೊಂದು ಭಾಗದಲ್ಲಿ ರಾಜಾತೋದರಮಲ್ ಮತ್ತು ಆತನ ಮಹಿಷಿಯ ಶಿಲಾಪ್ರತಿಮೆಗಳು ಅನ್ಯಮತ ಸಹಿಷ್ಣುತೆ ಮತ್ತು ದೈವಭಕ್ತಿಯನ್ನು ನೆನಪಿಗೆ ತರುತ್ತವೆ.

ದೇವಾಲಯದ ಮಾರುತಿಯ ಪ್ರಸನ್ನಮೂರ್ತಿ ದರ್ಶನದಿಂದ ಮಾನವನ ಮನದ ಪರಿತಾಪಗಳು ಶಾಂತಿಯಾಗಿ, ಆತ್ಮಾನಂದ ಅರಿವಾಗುತ್ತದೆ. ಸದಾಕಾಲವೂ ಇಲ್ಲಿನ ಪದ್ಧತಿ ವಿಶೇಷದಂತೆ ಕೇತಕೀ ಕುಸುಮಾಲಂಕಾರ, ರಜತ ಕವಚ ಕುಂಡಾಲಂಕಾರಗಳಿಂದ ತ್ರಿಕಾಲ ಪೂಜೆ ನಡೆಯುವುದು.

ಶ್ರೀ ರಾಮಾನುಜಾಚಾರ್ಯರು ಮಾರುತಿಯನ್ನು ನಮಸ್ತೇಸ್ತು ಪಾರ್ಥಧ್ವಜಾಯ ತುಭ್ಯಂ ನಮ:, ಕೇತಕೀ ಪುಷ್ಪ ಭೂಷಾಯ ! ತುಭ್ಯಂ ನಮಸ್ತೇತು ವೈಖಾನಸಾಚಾರ್ಯಯ ತುಭ್ಯಂ ! ಎಂದು ಸ್ತೋತ್ರ ಮಾಡಿರುತ್ತಾರೆ. ಬ್ರಹ್ಮಾಂಡ ಪುರಾಣದಲ್ಲಿ ಸಾಕ್ಷಾತ್ ಬ್ರಹ್ಮನು ತನ್ನ ಮಗ ನಾರದರಿಗೆ ಈ ಸ್ಥಳದ ಮಹಿಮೆಯನ್ನು ತಿಳಿಸಿದರೆಂದು ಉಲ್ಲೇಖವಾಗಿದೆ. ಅದರಂತೆ, ನಾರದರು ತನ್ನ ತಂದೆಯಾದ ಬ್ರಹ್ಮನನ್ನು ಲೋಕದಲ್ಲಿ ಮೋಸ, ವಂಚನೆಗಳು ವಿಪರೀತವಾಗಿದ್ದು ಅದರಿಂದ ಸಜ್ಜನರು ಉಳಿಯುವ ಹಾಗಿಲ್ಲವೆಂದೂ, ಇದಕ್ಕೆ ಒಂದು ಪರಿಹಾರವನ್ನು ತೋರಬೇಕೆಂದು ಕೇಳಿದಾಗ , ವಾಯುದೇವನು ತನ್ನ ಅಂಕುಶದಿಂದ ತನ್ನ ಮಡದಿಯಾದ ಅಂಜನಾದೇವಿಯಲ್ಲಿ ಮಹಾಬಲವಂತನೂ, ಬುದ್ಧಿವಂತನೂ ಆದ ಹನುಮಂತನನ್ನು ಸೃಷ್ಟಿಸಿದನೆಂದೂ, ಈ

ಅಂಜನಾದೇವಿಯ ಮಗನಾದ ಆಂಜನೇಯನು ಹುಟ್ಟಿದ ಪರ್ವತಕ್ಕೆ ಅಂಜನಾದ್ರಿಯೆಂದೂ ಈ ಸ್ಥಳದಲ್ಲಿ ಹೋಗಿ ನೆಲೆಸುವವರಿಗೆ ಯಾವ ಕಿರುಕಳವೂ ಇರುವುದಿಲ್ಲವೆಂದೂ ತಿಳಿಸಿದನೆಂದೂ ಉಲ್ಲೇಖವಿದೆ. ಈ ಅಂಜನಾದ್ರಿಯಲ್ಲಿ ಆಂಜನೇಯನು ಹುಟ್ಟಿ ಬಾಲ್ಯದಲ್ಲಿ ಸೂರ್ಯಭಗವಾನರ ಸನ್ನಿಧಿಯಲ್ಲಿ ವಿದ್ಯಾಭ್ಯಾಸಮಾಡಿ ಸಕಲ ಶಾಸ್ತ್ರ ಪಾರಂಗತನಾಗಿ ದಿವ್ಯಜ್ಞಾನವನ್ನು ಪಡೆದನು. ಅಂದಿನಿಂದ ಈ ಕ್ಷೇತ್ರವು ಭಾಸ್ಕರಕ್ಷೇತ್ರವಾಯಿತು.

ಆಂಜನೇಯನು ಲೋಕಕಲ್ಯಾಣಕ್ಕಾಗಿ ಶ್ರೀರಾಮನ ಸೇವೆಗೈದು, ರಾಕ್ಷಸಕುಲ ನಾಶವಾದ ಮೇಲೆ, ಶ್ರೀರಾಮಚಂದ್ರನು ಆಂಜನೇಯನನ್ನು ಕರೆದು " ನೀನು ನಿನ್ನ ಜನ್ಮ ಭೂಮಿಯಾದ ಅಂಜನಾದ್ರಿಯ ಬಳಿಗೆ ಹೋಗಿ ನೆಲೆಸು" ಎಂದು ಆಜ್ಞಾಪಿಸಿದನೆಂದೂ, ಅದರಂತೆ ಆಂಜನೇಯನು ಅಂಜನಾದ್ರಿಗೆ ಪೂರ್ವ ದಿಕ್ಕಿಗಿರುವ ಕದಳೀವನದಲ್ಲಿ ಶ್ರೀರಾಮತಾರಕಮಂತ್ರವನ್ನು ಪಠಿಸುತ್ತಾ ಭಕ್ತಪರಾಧೀನವಾಗಿ ನೆಲೆಸಿರುವನೆಂದು ಪ್ರತೀತಿ. ಆಂಜನೇಯನು ಅಲ್ಲಿ ಬಂದು ನೆಲೆಸಿದ್ದರಿಂದ ಅವನ ಸಮೀಪದಲ್ಲಿ ದೈತ್ಯದಾನವರಿಂದ ತಮಗೆ ತೊಂದರೆಯಿರುವುದಿಲ್ಲವೆಂದು ಯೋಚಿಸಿ, ಇಲ್ಲಿ ಸತ್ಪ್ರಜೆಗಳೆಲ್ಲರೂ ಬರಲು ಪ್ರಾರಂಭಿಸಿ ಹನುಮಂತನ ಪಾದಾರವಿಂದಗಳನ್ನು ಧ್ಯಾನಿಸುತ್ತಾ ನಿರ್ಭೀತರಾಗಿ ನೆಲೆಸಿದರೆಂದು ತಿಳಿದು ಬರುತ್ತದೆ. ಹೀಗೆ ಬಂದವರಲ್ಲಿ ವಸಿಷ್ಠರು ಮಹಾಶ್ರೇಷ್ಠರು. ಅವರು ಅಂಜನಾದ್ರಿಯಲ್ಲಿ ನೆಲೆಸಿ ನಿಶ್ಚಿಂತೆಯಿಂದ ತಪಸ್ಸು ಮಾಡುತ್ತಿದ್ದರು. ಅಂಜನಾದ್ರಿಗೆ ದಕ್ಷಿಣಕ್ಕಿರುವ ಆವಂತೀಗಿರಿ (ಈಗಿನ ಆವನಿಕ್ಷೇತ್ರ)ಯಲ್ಲಿ ವಾಲ್ಮೀಕಿ ಮಹರ್ಷಿಗಳೂ, ಉತ್ತರಕ್ಕೆ ಇರುವ ಕಾಂಡಿನ್ಯಗಿರಿಯ (ಈಗಿನ ಕುರುಡು ಮಲೆ)ಬಳಿ ಕೌಂಡಿನ್ಯ ಮಹರ್ಷಿಗಳೂ, ಪೂರ್ವಕ್ಕಿರುವ ನೃಸಿಂಹಾದ್ರಿ ಬಳಿ (ಈಗಿನ ನರಸಿಂಹ ತೀರ್ಥ) ಕೌಶಿಕ ಮತ್ತು ಅಗಸ್ತ್ಯ ಮಹರ್ಷಿಗಳೂ ನೆಲೆಸಿ ತಪಸ್ಸು ಮಾಡಿ, ಪ್ರಖ್ಯಾತರಾಗಿ ಜಗತ್'ಕಲ್ಯಾಣ ಮಾಡಿರುತ್ತಾರೆ.

ಅಂಜನಾದ್ರಿಯ ತಪ್ಪಲಿನಲ್ಲಿ ನಾಂಚಾಲಿ ಎಂಬ ದೇವತೆಯು ನೆಲೆಸಿರುವಳು. ಈಕೆಯು ಶಿವನೇ ಪತಿಯಾಗಬೇಕೆಂದು ಘೋರತಪಸ್ಸು ಮಾಡಿ ಆತನನ್ನು ಮೆಚ್ಚಿಸಿ ಮದುವೆಯಾಗಿ ನಂತರ ಶಿವನ ಅನುಜ್ಞೆಯಂತೆ ಅಂಜನಾದ್ರಿಯ ಸಮೀಪದಲ್ಲಿ ಆಂಜನೇಯನ ವಾಸಸ್ಥಾನವನ್ನು ರಕ್ಷಿಸುತ್ತಿರುವಳೆಂದು ತಿಳಿದು ಬರುತ್ತದೆ.

Feb 28th 1994 Hosa Diganta Bhaskar Kshethrada Mahime